# ಅಕ್ಕಮಹಾದೇವಿಯ ವಚನಗಳಲ್ಲಿ ಸ್ತ್ರೀ ಚಿಂತನೆಗಳು

**ಗೀತಾ ಎ.ಸಿ.**

ಡಾ. ಎನ್.ಎಸ್.ಎ.ಎಂ. ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜಪುರ ಗ್ರಾಮ, ಮೈಲಪ್ಪನಹಳ್ಳಿ, ಶಿವಕೋಟೆ.

DOI: https://doi.org/10.5281/zenodo.15490848

## ABSTRACT:

ಹನ್ನೆರಡನೆಯ ಶತಮಾನವೆಂದರೆ; ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಹಿತ್ಯಿಕ ಕ್ಷೇತ್ರದಲ್ಲಿ ಬದಲಾವಣೆಗೊಂಡ ಕಾಲ. ಅದನ್ನು ಕ್ರಾಂತಿ ಎಂದೇ ಕರೆಯಬೇಕಾಗುತ್ತದೆ. ಹಿಂದೆ ಸಮಾಜದಲ್ಲಿದ್ದ ಅಸಮಾನತೆ, ಶೋಷಣೆಗಳನ್ನು ಕಂಡು ಅನುಭವಿಸಿದ್ದ ಶರಣ, ಶರಣೆಯರು ಮೇಲು–ಕೀಳು ಸ್ತ್ರೀ–ಪುರುಷ ಇತ್ಯಾದಿ ಭೇದ ರಹಿತವಾದ ವರ್ಗರಹಿತವಾದ ಸಮಾಜವನ್ನು ಕಟ್ಟಲು ಪ್ರಯತ್ನಿಸಿದರು. 12ನೇ ಶತಮಾನದ ಪ್ರಸಿದ್ಧ ವಚನಕಾರ್ತಿ ಅಕ್ಕಮಹಾದೇವಿ. ಬಸವಣ್ಣನವರ ಸಮಕಾಲೀನಳಾಗಿ ಬದುಕಿದಳು. ಈಕೆ ಶಿವಶರಣೆಯಾಗಿ, ವಚನಕಾರ್ತಿಯಾಗಿ, ಚೆನ್ನಮಲ್ಲಿಕಾರ್ಜುನನ ಭಕ್ತೆಯಾಗಿ ಪ್ರಸಿದ್ಧಳಾದವಳು. ಈಕೆ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಉಡುತಡಿ ಎಂಬ ಗ್ರಾಮದಲ್ಲಿ ನಿರ್ಮಲ ಮತ್ತು ಸುಮತಿಯರ ಮಗಳಾಗಿ ಜನಿಸಿದಳು. ಬಾಲ್ಯದಲ್ಲೇ ಶಿವಭಕ್ತಿಯನ್ನು ಹೊಂದಿದ್ದ ಈಕೆಗೆ ಶಿವಪೂಜೆ ಶಿವಧ್ಯಾನಗಳೇ ಆಟಗಳಾಗಿದ್ದವು. ಪರಮಾತ್ಮನಾದ ಚೆನ್ನಮಲ್ಲಿಕಾರ್ಜುನನ ಮೇಲೆ ಅತೀವವಾದ ಪ್ರೀತಿ ಇಟ್ಟುಕೊಂಡಿದ್ದ ಈಕೆ ವೈವಾಹಿಕ ಬದುಕನ್ನು ತ್ಯಜಿಸಿ ದೇವರ ಸೇವೆಗೆ ತನ್ನನ್ನು ಅರ್ಪಿಸಿಕೊಂಡಳು. ಇದು ಮಹಿಳೆರ ಆಯ್ಕೆಯ ಸ್ವಾತಂತ್ರ್ಯವನ್ನು ತೋರಿಸುತ್ತದೆ. ಇವರ ವಚನಗಳು ಸಾಮಾಜಿಕ ಸುಧಾರಣೆಗೆ ಪ್ರೇರಣೆಯಾಗಿದ್ದು, ವಿಶೇಷವಾಗಿ ಸ್ತ್ರೀಯರ ಸ್ಥಿತಿ, ಸ್ವಾತಂತ್ರ್ಯ ಮತ್ತು ಅವರ ಮನೋಭಾವನೆಗಳಿಗೆ ಮಹತ್ವವನ್ನು ನೀಡಿವೆ. ಅಕ್ಕಮಹಾದೇವಿ ದೈಹಿಕ ಸೌಂದರ್ಯಕ್ಕೆ ಪ್ರಾಮುಖ್ಯತೆ ನೀಡದೆ, ಅದನ್ನು ಕ್ಷಣಿಕ ಮತ್ತು ವ್ಯರ್ಥವೆಂದು ಪ್ರತಿಪಾದಿಸುತ್ತಾರೆ. ಪುರುಷ ಪ್ರಧಾನ ಸಮಾಜದಲ್ಲಿ ಸಮಾಜ ಕಂಟಕರನ್ನು, ಸ್ತ್ರೀ ಶೋಷಕರನ್ನು ಹತ್ತಿಕ್ಕಿ ಇಲ್ಲಿಯೇ ಇದ್ದು ಗೆಲ್ಲಬೇಕೆಂಬ ಆಶಯ ಅಕ್ಕಮಹಾದೇವಿಯದು.

## KEYWORDS:

ಆಧ್ಯಾತ್ಮಿಕತೆ, ಸಮಾನತೆ, ಭಕ್ತಿ, ಪ್ರೀತಿ, ಸ್ತ್ರೀಸಂವೇದನೆ, ಜೀವನ ಮೌಲ್ಯ.

ಅನೇಕ ವಚನಕಾರ್ತಿಯರು ಅಕ್ಕಮಹಾದೇವಿಯನ್ನು ಒಳಗೊಂಡಂತೆ; ಪಿತೃಪ್ರಧಾನ ವ್ಯವಸ್ಥೆಯ ವಿರುದ್ಧ ಪ್ರತಿಭಟನೆಯನ್ನು ಮಾಡುತ್ತಾರೆ. ಹೆಣ್ಣನ್ನು ಒಂದು ಭೋಗದ ವಸ್ತುವಿನಂತೆ ನೋಡುವುದರಿಂದ ಆಕೆ ಪ್ರಚೋದನೆಗಳಿಗೆ ಒಳಗಾಗುತ್ತಾಳೆ. ಪುರುಷರು ಹೆಣ್ಣಿನಿಂದ ಅಪೇಕ್ಷಿಸುವ ಬಾಹ್ಯಸುಖ, ಭಾವನೆಗಳು, ಅಭಿಪ್ರಾಯಗಳು, ನಿಲುವುಗಳನ್ನು ನಿರಾಕರಣೆ ಮಾಡುತ್ತಾರೆ.

ಮಹಿಳೆಯರ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದ ಮೊದಲ ಮಹಿಳೆಯಾದ ಅಕ್ಕಮಹಾದೇವಿಯ ವಚನಗಳಲ್ಲಿ ಆಧ್ಯಾತ್ಮಿಕತೆ, ಸಮಾನತೆ, ಸ್ತ್ರೀ ಚಿಂತನೆಗಳು. ಪ್ರೀತಿ ಮತ್ತು ತ್ಯಾಗದಂತಹ ಅನೇಕ ಜೀವನ ಮೌಲ್ಯಗಳನ್ನು ಕಾಣುತ್ತೇವೆ. ಇವರ ದೃಷ್ಟಿಯಲ್ಲಿ ಎಲ್ಲರಿಗೂ ಸಮಾನ ಸ್ಥಾನವಿದೆ. ಸ್ವತಂತ್ರವಾದ ಸ್ತ್ರೀ ಸಂವೇದನೆ, ವ್ಯಕ್ತಿಗತ ಅನುಭವ, ವಿಶಿಷ್ಟ ಮನೋಭಾವ – ಇವುಗಳಿಂದ ತಮ್ಮ ಅಭಿಪ್ರಾಯಗಳನ್ನು ತಿಳಿಯಪಡಿಸುತ್ತಾರೆ. ಧರ್ಮ, ಜಾತಿ, ಮತ, ಆಚಾರಗಳು, ನಿಷ್ಠೆ, ನಂಬಿಕೆಗಳು ಇತ್ಯಾದಿ ವಿಷಯಗಳನ್ನು ಬಹಳ ಜಾಗಾರುಕತೆಯಿಂದ ತಮ್ಮ ಮಿತಿಯೊಳಗೆ ಆಲೋಚಿಸುತ್ತಾರೆ.

**ಎಮ್ಮೆಗೊಂದು ಚಿಂತೆ! ಸಮ್ಮಗಾರನಿಗೊಂದು ಚಿಂತೆ!!**
**ನನಗೆ ನನ್ನ ಚಿಂತೆ ತನಗೆ ತನ್ನ ಕಾಮದ ಚಿಂತೆ!!**
**ಒಲ್ಲೆ ಹೋಗು, ಸೆರಗು ಬಿಡು ಮರುಳೆ!**
**ನನಗೆ ಚೆನ್ನಮಲ್ಲಿಕಾರ್ಜುನ ದೇವರು**
**ಒಲಿವನೋ ಒಲಿಯನೋ ಎಂಬ ಚಿಂತೆ!!**

ಇದು ಅಕ್ಕಮಹಾದೇವಿಯ ಬದುಕಿಗೆ ಸಂಬಂಧಿಸಿದ್ದು, ಆಕೆಯ ಗಂಡ ಕೌಶಿಕನಿಂದಾದ ಮಾನಸಿಕ ಹಿಂಸೆಯನ್ನು ಈ ವಚನದ ಮೂಲಕ ಪ್ರತಿಭಟಿಸುತ್ತಾಳೆ. ಇದು ಉಳಿದವರ ದುಕಿಗೂ ಅನ್ವಯವಾಗುತ್ತದೆ. ಎಮ್ಮೆಗೆ ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳುವುದೇ ಚಿಂತೆ. ಬೆಳೆದವರಾರು? ಈ ಫಸಲಿನಲ್ಲಿ ಯಾರ ದುಡಿಮೆ ಇದೆ ಎಂಬುವುದರ ಅರಿವು ಇರುವುದಿಲ್ಲ. ಬೆಳೆದವರ ಚಿಂತೆ ಅದಕ್ಕಿರುವುದಿಲ್ಲ. ಅದಕ್ಕಾಗಿ ಹೊಟ್ಟೆ ತುಂಬಾ ತಿಂದು ಬೆಳೆಯನ್ನು ತುಳಿದು ನಾಶಗೊಳಿಸುತ್ತದೆ.

ಸಮಗಾರನಾದವನು ತನ್ನ ಹಾಗೂ ಮನೆಮಂದಿಯ ಹೊಟ್ಟೆ ತುಂಬಿಸಿಕೊಳ್ಳುವ ಚಿಂತೆಯಲ್ಲಿರುತ್ತಾನೆ. ದಾರಿಯಲ್ಲೊಂದು ಎಮ್ಮೆಯನ್ನ ಕಂಡರೆ ಈ ಎಮ್ಮೆಯನ್ನು ಕೊಂದರೆ ಇದರ ಚರ್ಮದಿಂದ ಎಷ್ಟು ಜೊತೆ ಚಪ್ಪಲಿ ಹೊಲಿಯಬಹುಬು ಎಷ್ಟು ದುಡ್ಡು ಸಂಪಾದಿಸಬಹುದೆಂದು ಲೆಕ್ಕಚಾರ ಹಾಕುತ್ತಿರುತ್ತಾನೆ. ಅದು ಯಾರ ಎಮ್ಮೆ ಎಷ್ಟು ಹಣ ಕೊಟ್ಟು ಕೊಂಡುಕೊಂಡಿದ್ದಾರೆ? ಸಾಕಿ ಬೆಳೆಸಿದ ಬಗೆ ಹೇಗೆ? ಎಂಬ ಯೋಚನೆ ಸಹ ಬರುವುದಿಲ್ಲ.

ಹಾಗೆಯೇ ಇಲ್ಲಿ ಅಕ್ಕಮಹಾದೇವಿಯ ಬದುಕಿಗೆ ಇದು ಹೊಂದಿಕೆಯಾಗುತ್ತದೆ. ಅಕ್ಕಮಹಾದೇವಿಗೆ ತನ್ನ ಭವಿಷ್ಯದ ಚಿಂತೆ. ಚೆನ್ನಮಲ್ಲಿಕಾರ್ಜುನನನ್ನೇ ಮದುವೆಯಾಗ ಬೇಕೆಂಬ ಬಯಕೆ. ಆದರೆ ತಂದೆ ತಾಯಿಯರ ಬಲವಂತದಿಂದ ಕೌಶಿಕ ರಾಜನನ್ನು ತನ್ನ ಶಿವ ಪೂಜೆ ಅಡ್ಡಿಯಾಗಬಾರದು ಎಂಬ ಷರತ್ತಿನೊಂದಿಗೆ ಮದುವೆಯಾಗುತ್ತಾಳೆ. ಆದರೆ ಕೌಶಿಕ ಅಕ್ಕ ಮಹಾದೇವಿಯ ಹಿಂದೆ ಮುಂದೆ ಓಡಾಡುತ್ತಾ ತನ್ನ ಕಾಮವನ್ನು ತೀರಿಸಿಕೊಳ್ಳುವ ಬಯಕೆಯನ್ನು ವ್ಯಕ್ತ ಪಡಿಸುತ್ತಾನೆ. ಆಕೆಯ ಮಾನಸಿಕ, ದೈಹಿಕ ಆಸೆ ಆಕಾಂಕ್ಷೆಗಳೇನು? ಎಂಬುದನ್ನು ಯೋಚಿಸಲಾರ. ಇಬ್ಬರದು ಬೇರೆ ಬೇರೆಯಾದ

ಚಿಂತೆ. ಆದ್ದರಿಂದ ಶಿವ ಪೂಜೆಗೆ ಅಡ್ಡಿ ಮಾಡುತ್ತಿರುವ ಕೌಶಿಕನಿಗೆ "ಒಲ್ಲೆ ಹೋಗು, ಸೆರಗ ಬಿಡು ಮರುಳೆ" ಎಂದು ನಿಷ್ಟುರವಾಗಿ ಹೇಳಿಬಿಡುತ್ತಾಳೆ.

**ಬಟ್ಟಿಹ ಮೊಲೆಯ ಭರದ ಜವ್ವನದ ಚೆಲುವ ಕಂಡು ಬಂದಿರಣ್ಣಾ**
**ಅಣ್ಣಾ ನಾನು ಹೆಂಗೂಸಲ್ಲ, ಅಣ್ಣಾ ನಾನು ಸೂಳೆಯಲ್ಲ!**
**ಅಣ್ಣಾ ಮತ್ತೆ ನನ್ನ ಕಂಡು ಕಂಡು ಆರೆಂದು ಬಂದಿರಣ್ಣಾ?**
**ಚೆನ್ನಮಲ್ಲಿಕಾರ್ಜುನನಲ್ಲದ ಮಿಕ್ಕಿನ ಪರಪುರುಷರನು**
**ನಮಗಾಗದ ಮೋರೆ ನೋಡಣ್ಣಾ!**

ಪುರುಷ ಪ್ರಧಾನ ಸಮಾಜ ಹೆಣ್ಣನ್ನು ಕಾಣುವ ರೀತಿಯನ್ನು ಈ ವಚನದ ಮೂಲಕ ಅರ್ಥೈಸಿಕೊಳ್ಳಬಹುದಾಗಿದೆ. ಪ್ರತಿಯೊಂದು ಸಮಾಜದಲ್ಲೂ ವಾಸಿಸುವ ಹೆಣ್ಣುಗಳ ಸಾಮಾನ್ಯ ಸಮಸ್ಯೆಯೇ ಆಗಿದೆ. ತುಂಬು ಯೌವ್ವನದ ಚೆಲುವನ್ನು ಕಂಡು ಬಂದಿದ್ದೀರಾ ಅಣ್ಣಂದಿರಾ! ನಾನು ಹೆಣ್ಣಲ್ಲ, ಸೂಳೆಯಲ್ಲ, ಚೆಲುವೆಯಲ್ಲ ಎಂದು ಹೇಳುತ್ತಾ ಎಚ್ಚರದಿಂದ ಪ್ರತಿ ಸಲವೂ ಅಣ್ಣಾ ಅಣ್ಣಾ ಎಂದೇ ಸಂಬೋಧಿಸುತ್ತಾಳೆ. ಚೆನ್ನಮಲ್ಲಿಕಾರ್ಜುನ ಮಾತ್ರ ತನ್ನ ಗಂಡ. ಉಳಿದ ಪುರುಷರೆಲ್ಲರೂ ತನಗೆ ಸಹೋದರರು. ಎಂದು ಹೇಳುತ್ತಾ ಪ್ರಸ್ತುತ ಸಮಾಜದಲ್ಲಿ ಸಹೋದರಿ ಎಂಬ ಭಾವದ ಕೊರತೆಯನ್ನು ಎತ್ತಿ ಹಿಡಿದಿದ್ದಾರೆ. ಹೆಣ್ಣನ್ನು ಪುರುಷ ದೈಹಿಕ ಸುಖಕ್ಕಾಗಿ ಮಾತ್ರ, ಎಂಬಂತೆ ನೋಡುತಿದ್ದಾನೆ. ಹಾಗಾಗಿ ಈ ಸಮಾಜದಲ್ಲಿ ತಮಗೆ ಮುಕ್ತಿ ಬೇಕು ಎಂಬ ಆಶಯವನ್ನು ವ್ಯಕ್ತ ಪಡಿಸುತ್ತಿದ್ದಾರೆ.

**ಎಲೆ ಅಣ್ಣಾ ಅಣ್ಣಾ, ನೀವು ಮರುಳಲ್ಲಾ ಅಣ್ಣಾ**
**ಎನ್ನ ನಿನ್ನಳವೆ? ಹದಿನಾಲ್ಕು ಲೋಕವ ನುಂಗಿದ**
**ಕಾಮನ ಬಾಣದ ಗುಣ ಎನ್ನನಿನ್ನಳವೇ?**
**ವಾರುವ ಮುಗ್ಗಿದಡೆ, ಮಿಡಿಹರಿಯ ಹೊಯ್ವರೆ?**
**ಮುಗ್ಗಿದ ಭಂಗವ ಮುಂದೆ, ರಣದಲ್ಲಿ ತಿಳಿವುದು.**
**ನಿನ್ನ ನೀ ಸಂವರಿಸಿ ಕೈದುವ ಕೊಳ್ಳಿರಣ್ಣಾ**
**ಚೆನ್ನಮಲ್ಲಿಕಾರ್ಜುನನೆಂಬ ಹಗೆಗೆ ಬೆಂಗೊಡದಿರಣ್ಣಾ. .**

ಎಲೆ ಅಣ್ಣಗಳಿರಾ ನೀವು ಹುಚ್ಚರಲ್ಲ. ಹದಿನಾಲ್ಕು ಲೋಕದಲ್ಲಿಯೂ ಕಾಮ ಯಾರನ್ನು ಬಿಟ್ಟಿಲ್ಲ. ಹರಿ ಅಜ, ಸುರರನ್ನು ಸಹ ಬಿಟ್ಟಿಲ್ಲ. ಕುದುರೆ ಮುಗ್ಗರಿಸಿದರೆ ಅದರ ಮಿಣಿ (ಲಗಾಮು) ಯನ್ನು ಕತ್ತರಿಸಿಟ್ಟು ಮತ್ತೆ ಹಾಕಬಹುದು. ಯಾಕೆ ಮುಗ್ಗರಿಸಿತು? ಎಂಬುದನ್ನು ತಿಳಿದು ಕೊಳ್ಳಬೇಕು. ಇಲ್ಲದಿದ್ದರೆ ಮುಂದೆ ಯುದ್ಧರಂಗದಲ್ಲಿ ತೊಂದರೆಯಾಗುತ್ತದೆ. ಕಾಮ ವಿಕಾರದ, ನಿಯಂತ್ರಣವನ್ನು ಮಾಡಿಕೊಳ್ಳಬೇಕು. ಅಹಂಕಾರವನ್ನು ಕಡೆಗಣಿಸಿ, ಕಾಮ ಎಂಬ ವೈರಿಯನ್ನು ಓಡಿಸಬೇಕು. ಆಗ ಮಾತ್ರ ಪರಮಾತ್ಮನ ಒಲುಮೆಗೆ ಪಾತ್ರನಾಗಬಹುದು.

**ನಿಮ್ಮ ನಿಲವಿಂಗೆ ನೀವು ನಾಚಬೇಡವೇ?**

**ಅನ್ಯರ ಕೈಯಲ್ಲಿ ಅಲ್ಲ ಎನಿಸಿಕೊಂಬ ನಡೆನುಡಿ ಏಕೆ?**
**ಅಲ್ಲ ಎನಿಸಿಕೊಂಬುದರಿಂದ**
**ಆ ಕ್ಷಣವೆ ಸಾವುದು ಲೇಸು ಕಾಣಾ ಚೆನ್ನಮಲ್ಲಿಕಾರ್ಜುನಾ**

ಅಣ್ಣಗಳಿರಾ ಅಕ್ಕಗಳಿರಾ ನಿಮ್ಮ ನಿಲುವುಗಳನ್ನು ವಿಚಾರಿಸಿ ನೀವೇ ನಾಚಿಕೊಳ್ಳಬೇಕು. ನಮ್ಮಲ್ಲಿರುವ ತಪ್ಪುಗಳಿಗೆ ನಾವೇ ನಾಚಬೇಕು. ನಾವೇ ಸರಿ ಮಾಡಲು ಪ್ರಯತ್ನ ಪಡಬೇಕು. ನಾವು ದಾನ, ಧರ್ಮ. ದಾಸೋಹ, ಕಾಯಕದ ಮೂಲಕ ಬದುಕನ್ನು ಕಟ್ಟಿಕೊಳ್ಳಬೇಕು. ಹೊರತಾಗಿ ಬೇರೆಯವರಿಂದ ತಮ್ಮ ತಪ್ಪನ್ನು ಹೇಳಿಸಿಕೊಂಡು, ಅವಮಾನ ಮಾಡಿಸಿಕೊಂಡು ಬದುಕುವುದಕ್ಕಿಂತ ಸಾಯುವುದೇ ಲೇಸು ಎಂದಿದ್ದಾರೆ.

**ಸಂಸಾರವೆಂಬ ಹಗೆಯಯ್ಯ ತಂದೆ,**
**ಎನ್ನ ವಂಶವಂಶ ತಪ್ಪದೆ ಅರಸಿಕೊಂಡು ಬರುತ್ತಿದೆಯಯ್ಯ!**
**ಎನ್ನುವನರಸಿಯರಸಿ ಹಿಡಿದು ಕೊಲ್ಲುತ್ತಿದೆಯಯ್ಯ!**
**ನಿಮ್ಮ ಮರೆವೊಕ್ಕೆ ಕಾಯಯ್ಯ!**
**ಎನ್ನ ಬಿನ್ನಪವನವಧಾರು, ಚೆನ್ನಮಲ್ಲಿಕಾರ್ಜುನಯ್ಯ!**

ಸಂಸಾರವೆಂಬುದು ಹಗೆಯಾಗಿ ತನ್ನನ್ನು ಕಾಡುತ್ತಿದೆ. ಸಂಸಾರ ಎಂಬ ವೈರಿ ವಂಶಪಾರಂರ್ಯವಾಗಿ ಬರುತ್ತಿದೆ. ಅಜ್ಜನ ಕಾಲದಿಂದ ಮೊಮ್ಮಗನ ಕಾಲದವರೆಗೂ ಹಗೆ ಎನ್ನುವುದು ವಂಶ ವಂಶಕ್ಕೂ ಬರುತ್ತಿದೆ. ಹಾಗೆಯೇ ಸಂಸಾರ ಎಂಬುದೊಂದು ವೈರಿ. ಇದರಿಂದ ಬಿಡಿಸಿಕೊಳ್ಳ ಬೇಕೆಂದರೆ ಭಗವಂತನ ಮೊರೆ ಹೋಗಬೇಕೆಂದಿದ್ದಾರೆ.

**ತನುವಿನ ಸತ್ವವ ನಿಲಿಸಿತ್ತು,**
**ಮನದ ವಿರಕ್ತಿಯ ಕೆಡಿಸಿತ್ತು ಘನವ ಕಾಣಲೀಯದು ದುಃಖ**
**ಅರುಹಿರಿಯರ ತರಕಟ ಕಾಡಿತ್ತು ಚೆನ್ನಮಲ್ಲಿಕಾರ್ಜುನಯ್ಯ**

ಸಂಸಾರದ ಬಂಧನದಲ್ಲಿ ಸಿಕ್ಕಿ ಹಾಕಿಕೊಂಡರೆ, ಶರೀರ ಬಳಲುತ್ತದೆ, ಶಕ್ತಿ ಹೀನವಾಗುತ್ತದೆ. ಸಂಸಾರದ ವ್ಯಾಮೋಹದಿಂದ ಮನಸ್ಸಿನ ವಿರಕ್ತಿ ಕಡಿಮೆಯಾಗುತ್ತದೆ. ಸುಖ ದುಃಖದಲ್ಲಿ ಮುಳುಗಿರುವಾಗ ಆಧ್ಯಾತ್ಮದ ಬಗ್ಗೆ ನೆನಪು ಇರುವುದಿಲ್ಲ. ಇದು ಬಡವ - ಶ್ರೀಮಂತ, ಹಿರಿಯ-ಕಿರಿಯ ಮೇಲು-ಕೀಳು ಎಂಬ ತರತಮವಿಲ್ಲದೆ ಎಲ್ಲರನ್ನೂ ಕಾಡುತ್ತದೆ. ಯಾವ ವ್ಯಕ್ತಿಯನ್ನು ಬಿಡುವುದಿಲ್ಲ.

**ಬೆಂದ ಸಂಸಾರ ಬೆಂಬಿಡದೆ ಕಾಡುತ್ತಿರುವುದಯ್ಯ!**
**ಏವೆನಯ್ಯ ಏವೆನಯ್ಯ?**
**ಅಂದಂದಿನ ದಂದುಗಕ್ಕೆ ಏವೆನಯ್ಯ ಏವೆನಯ್ಯ?**
**ಬೆಂದೊಡಲ ಹೊರೆವುದಕ್ಕೆ ನಾನಾರೆ!!**
**ಚೆನ್ನಮಲ್ಲಿಕಾರ್ಜುನ, ಕೊಲ್ಲು ಕಾಯಿ ನಿಮ್ಮ ಧರ್ಮ!**

ಮಾನವ ಆಧ್ಯಾತ್ತಿಕ, ಬೌದ್ಧಿಕ, ದೈವಿಕ ಎಂಬ ತೊಂದರೆಗಳಲ್ಲಿ ಬೆಂದು ಬಳಲುತ್ತಾನೆ. ಸಂಸಾರ ಮತ್ತೆ ಮತ್ತೆ ಬೆನ್ನು ಬಿಡದೆ ಕಾಡುತ್ತದೆ. ಒಬ್ಬ ವ್ಯಕ್ತಿ ಒಂದು

ಕಂಬವನ್ನು ಹಿಡಿದು ಕೊಂಡು ಕಂಬ ತನ್ನನ್ನು ಬಿಡುತ್ತಿಲ್ಲವೆಂದರೆ ಆಗುತ್ತದೆಯೇ? ಆತನೇ ಕಂಬವನ್ನು ಬಿಡಬೇಕು. ಹಾಗೆಯೇ ಸಂಸಾರದ ಬಂಧನದಲ್ಲಿ ಸಿಕ್ಕಿ ಹಾಕಿಕೊಂಡರೆ ಬರುವಂತಹ ಸಮಸ್ಯೆಯಿಂದ ಅಂದಂದೆ ಪರಿಹಾರವನ್ನು ಕಂಡು ಕೊಳ್ಳಬೇಕು. ಈ ರೀತಿ ಬೆಂದ ದೇಹವನ್ನು ನನ್ನಿಂದ ರಕ್ಷಿಸಲು ಸಾಧ್ಯವಿಲ್ಲ. ಕೊಲ್ಲುವುದು ಕಾಯುವುದು ನಿಮ್ಮ ಧರ್ಮ ಎಂದಿದ್ದಾರೆ.

**ಎನ್ನ ಮಾಯದ ಮದವ ಮುರಿಯಯ್ಯ!**
**ಎನ್ನ ಕಾಯದ ಕಳವಳವ ಕೆಡಿಸಯ್ಯ!**
**ಎನ್ನ ಜೀವದ ಜಂಜಡವ ಬಿಡಿಸಯ್ಯ**
**ಎನ್ನ ಚೆನ್ನಮಲ್ಲಿಕಾರ್ಜುನಯ್ಯ,**
**ಎನ್ನ ಸುತ್ತಿದ ಮಾಯಾ ಪ್ರಪಂಚವ ಬಿಡಿಸಾ ನಿಮ್ಮ ಧರ್ಮ**

ಮಾಯೆಯಿಂದ ತನ್ನಲ್ಲಿ ಹುಟ್ಟಿದ ಮೋಹ, ಭ್ರಮೆ, ಭ್ರಾಂತಿಯಲ್ಲಿರುವ ನನ್ನ ಅಹಂಕಾರವನ್ನು ನಾಶಗೊಳಿಸು. ಯಾವುದರ ಮೇಲೆಯೂ ಆಸೆ ಉಂಟಾಗದಂತೆ ಮಾಡು ದೇವರೆ ಎಂದು ಬೇಡಿಕೊಳ್ಳುತ್ತಾಳೆ. ಎನ್ನ ಕಾಯದ ಕಳವಳ ಎಂದರೆ ದೇಹವೇ ನನ್ನದು ಎಂಬ ಅಜ್ಞಾನ. ಅಳಿದು ಹೋಗುವ ದೇಹದ ಮೇಲಿನ ಮೋಹವನ್ನು ದೂರ ಮಾಡು. ಈ ಲೋಕದ ಜಂಜಾಟದಿಂದ ಪಾರು ಮಾಡು. ಇಲ್ಲಿ ನಡೆಯುವ ಗಂಡು – ಹೆಣ್ಣನ್ನು ಬಯಸುವುದು. ಹೆಣ್ಣು– ಗಂಡನ್ನು ಬಯಸುವುದು ಇದೇ ಮಾಯೆ. ಇದರಿಂದ ನನ್ನನ್ನು ಬಿಡಿಸು ಎಂದು ಚೆನ್ನಮಲ್ಲಿಕಾರ್ಜುನನಲ್ಲಿ ಬೇಡಿಕೊಳ್ಳುತ್ತಾಳೆ.

**ನಮಗೆ ನಮ್ಮ ಲಿಂಗದ ಚಿಂತೆ**
**ನಮಗೆ ನಮ್ಮ ಭಕ್ತರ ಚಿಂತೆ**
**ನಮಗೆ ನಮ್ಮ ಆದ್ಯರ ಚಿಂತೆ**
**ನಮಗೆ ನಮ್ಮ ಚೆನ್ನಮಲ್ಲಿಕಾರ್ಜುನಯ್ಯನ**
**ಚಿಂತೆಯಲ್ಲದೆ ಲೋಕದ ಮಾತು ನಮಗೇಕಣ್ಣಾ**

ಮಾನವನಿಗೆ ಇರುವ ಚಿಂತೆಗಳನ್ನು ಎಣಿಸಲು ಸಾಧ್ಯವಿಲ್ಲ. ಆದರೂ ತಮ್ಮ ಚಿಂತೆಗಳನ್ನು ಬದಿಗಿರಿಸಿ ಲೋಕದ ಚಿಂತೆಗಳನ್ನು ಮಾಡಬೇಕು. ಅದು ಹೇಗೆಂದರೆ; ತನ್ನದೇ ಆದ ಚಿಂತೆಗಳನ್ನು ಈ ವಚನದ ಮೂಲಕ ತಿಳಿಯಪಡಿಸುತ್ತಾರೆ. ಅಣ್ಣಗಳೀರಾ ನಮಗೆ ನಮ್ಮ ಲಿಂಗ ದೇವರ ಚಿಂತೆ ಇದೆ. ಲಿಂಗ ದೇವ ಒಲಿಯುತ್ತಾನೋ? ಇಲ್ಲವೋ? ಯಾವಾಗ ಬಂದು ಹರಸುತ್ತಾನೋ ಎಂಬ ಪುರಾತನರ ಆಶೀರ್ವಾದ ಸಿಗುವುದೋ ಎಂಬ ಚಿಂತೆ ಇರುವಾಗ, ಲೋಕದ ಚಿಂತೆ ಇಲ್ಲ ಎಂದು ಸ್ಪಷ್ಟ ಪಡಿಸಿದ್ದಾರೆ.

**ರತ್ನದ ಸಂಕೋಲೆಯಾದಡೆ ತೊಡರಲ್ಲವೆ?**
**ಮುತ್ತಿನ ಬಲೆಯಾದಡೆ ಬಂಧನವಲ್ಲವೆ?**

**ಚಿನ್ನದ ಕತ್ತಿಯಲ್ಲಿ ತಲೆ ಹೊಯ್ದಡೆ ಸಾಯದಿರ್ಪರೆ?ಲೋಕದ**
**ಭಜನೆಯ ಭಕ್ತಿಯಲ್ಲಿ ಸಿಲುಕಿದಡೆ ಜನನ ಮರಣ**
**ಬಿಡುವುದೆ ಚೆನ್ನಮಲ್ಲಿಕಾರ್ಜುನಾ?**

ರತ್ನದ ಬೇಡಿಯಾದರೇನು? ಅದು ಬೇಡಿಯೇ ಆಗುತ್ತದೆ. ಮುತ್ತಿನ ಬಲೆಯಾದರೇನು? ಅದರಿಂದ ಸಹ ಬಂಧನವೇ ಆಗುತ್ತದೆ. ಬಂಗಾರದಿಂದ ಮಾಡಿದ ಕತ್ತಿಯಿಂದ ತಲೆಗೆ ಹೊಡೆದರೆ ಸಾಯದೆ ಇರುತ್ತಾರೆಯೇ? ಈ ಲೌಕಿಕ ಬಂಧನದಲ್ಲಿ ಸಿಲುಕಿದ ಭಕ್ತ ಮೋಕ್ಷ ಹೊಂದಲು ಸಾಧ್ಯವೇ? ಭಕ್ತಿ ಮತ್ತು ಭಜನೆಯಲ್ಲಿ ತೊಡಗಿದರೂ ಆತ ಹುಟ್ಟು ಸಾವುಗಳಿಂದ ತಪ್ಪಿಸಿ ಕೊಳ್ಳಲು ಸಾಧ್ಯವಿಲ್ಲ. ಎಂದು ಅಕ್ಕ ಮಹಾದೇವಿ ಈ ವಚನದಲ್ಲಿ ಹೇಳಿದ್ದಾರೆ.

**ಉಳ್ಳುದೊಂದು ತನು, ಉಳ್ಳುದೊಂದು ಮನ**
**ನಾನಿನ್ನಾವ ಮನದಲ್ಲಿ ಧ್ಯಾನ ಮಾಡುವೆನಯ್ಯ?**
**ಸಂಸಾರವನಾವ ಮನದಲ್ಲಿ ತಲ್ಲೀಯವಾಹೆನಯ್ಯಾ?**
**ಅಕಟಕಟಾ ಕೆಟ್ಟೆ ಕೆಟ್ಟೆ? ಸಂಸಾರಕ್ಕಲ್ಲಾ ಪರಮಾರ್ಥಕ್ಕಲ್ಲ?**
**ಎರಡಕ್ಕೆ ಬಿಟ್ಟ ಕರುವಿನಂತೆ?**
**ಬಿಲ್ವ ಬೆಳವಲಕಾಯನೊಂದಾಗಿ ಹಿಡಿಯಬಹುದೆ ಚೆನ್ನಮಲ್ಲಿಕಾರ್ಜುನಾ?**

ಮನುಷ್ಯನಿಗೆ ಇರುವುದೊಂದೇ ದೇಹ, ಇರುವುದೊಂದೇ ಮನಸ್ಸು. ಒಂದು ಸಲ ಒಂದೇ ಕೆಲಸ ಮಾಡಲು ಸಾಧ್ಯ. ಒಂದೆ ಒರೆಯಲ್ಲಿ ಒಂದೇ ಖಡ್ಗವನ್ನು ಹಿಡಿಯಲು ಸಾಧ್ಯ. ದೇವರು ಸಂಸಾರ ಮತ್ತು ಪರಮಾರ್ಥ ಎರಡನ್ನು ಕೊಟ್ಟಿದ್ದಾನೆ. ಸಂಸಾರದಲ್ಲಿ ದೇಹ ಮಗ್ನವಾದರೆ, ಯಾವ ಮನಸ್ಸಿನಿಂದ ಧ್ಯಾನ ಮಾಡಲು ಸಾಧ್ಯವಾಗುತ್ತದೆ. ಪಾರಮಾರ್ಥದಲ್ಲಿ ಮನಸ್ಸು ಮಗ್ನವಾದರೆ ಯಾವ ಮನದಿಂದಲೂ ಸಂಸಾರದಲ್ಲಿ ತಲ್ಲೀನನಾಗಲು ಸಾಧ್ಯವಾಗುವುದಿಲ್ಲ. ಇದು ಘೋರತನವಾಗುತ್ತದೆ. ಈ ಜಗತ್ತಿನಲ್ಲಿ ಯಾವುದನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಎರಡು ಆಕಳಿಗೆ ಒಂದು ಕರುವನ್ನು ಬಿಟ್ಟಂತೆ ಆಗುತ್ತದೆ. ಅದು ಸ್ವಲ್ಪ ಹೊತ್ತು ಒಂದು ಹಸುವಿನ ಹಾಲನ್ನು, ಅದು ಸ್ವಲ್ಪ ಹೊತ್ತು ಇನ್ನೊಂದು ಹಸುವಿನ ಹಾಲನ್ನು ಕುಡಿಯುವ ಹಾಗೆ ಆಗುತ್ತದೆ. ಈ ರೀತಿಯ ಪರಿಸ್ಥಿತಿಯಾಗಿದೆ. ಬಿಲ್ವ ಬೇಲದ ಹಣ್ಣಿನಂತಾಗಿದೆ ನನ್ನ ಸ್ಥಿತಿ. ನೋಡಲು ಒಂದೆ ರೀತಿ ಇದ್ದರೂ ರುಚಿ ಬೇರೆ ಬೇರೆಯಾಗಿರುತ್ತದೆ. ಬಿಲ್ವ ಪತ್ರೆ ಜಡದ, ಬೆಳವಲ ಪರಮಾರ್ಥದ ಸಂಕೇತ. ಅದ್ದರಿಂದ ನನ್ನನ್ನು ರಕ್ಷಿಸು ರಕ್ಷಿಸು ಎಂದು ಪ್ರಾರ್ಥಿಸಿಕೊಳ್ಳುತ್ತಾಳೆ.

ಒಟ್ಟಾರೆಯಾಗಿ, ಅಕ್ಕನ ಬದುಕಿನ ಈ ಘಟನೆಯ ವಚನಗಳು ಪ್ರಸುತದ ಸಮಾಜಕ್ಕೂ ಅನ್ವಯವಾಗುತ್ತದೆ. ಗಂಡ–ಹೆಂಡತಿ, ಮಾಲೀಕ–ಕಾರ್ಮಿಕ, ಮೇಲಧಿಕಾರಿ–ಕೆಳಾಧಿಕಾರಿ, ಸರ್ಕಾರ–ಪ್ರಜೆಗಳು ಹೀಗೆ ಕೆಳ ಸ್ತರದಿಂದ ಮೇಲುಸ್ತರದವರೆಗೂ ವಿರುದ್ಧವಾದ ಚಿಂತೆಗಳೇ ತುಂಬಿ ಕೊಂಡು ದೈಹಿಕ, ಮಾನಸಿಕ

ಆರೋಗ್ಯಗಳು ನಾಶವಾಗುವುದರೊಂದಿಗೆ ಸಮಾಜದ ಅಭಿವೃದ್ಧಿಯೂ ಕುಂಠಿತವಾಗುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲ.

**ಪರಾಮರ್ಶನ ಗ್ರಂಥಗಳು:**

1. ಬಸವರಾಜು ಎಲ್. (ಸಂ.), (1997), ಅಕ್ಕನ ವಚನಗಳು, ಗೀತಾ ಬುಕ್ ಹೌಸ್, ಮೈಸೂರು.
2. ನಾಗಭೂಷಣಸ್ವಾಮಿ ಓ.ಎಲ್., (2014), ವಚನ ವಿಚಾರ, ಅಲ್ಲಮ ಪ್ರಕಾಶನ, ಮೈಸೂರು.
3. ಶೈಲಜಾ ಉಡಚಣ, (1996), ವಚನಕಾರ್ತಿಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
4. ಸವಿತ ಕೊಟಬಾಗಿ, (2014), ಸಾಹಿತ್ಯ ಮಂಥನ, ಆತ್ಮಶ್ರೀ ಪ್ರಕಾಶನ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.